**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 1562/2024**

**ಫಿರ್ಯಾದುದಾರರು** ಸೆಂಟ್ ಮಿಲ್ಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ,
ಕಾರವಾರ, ಭಟ್ಕಳ ಶಾಖೆ, ಪ್ರತಿನಿಧಿಸುವವರು,
ಇದರ ಲೋನ್ ಸೆಕ್ಷನ್ ಇನ್‌ಚಾರ್ಜ್,
ಶ್ರೀ ಕೀರ್ತಿರಾಜ್ ಪಿ. ಶಿರಾಲಿ

**– ವಿರುದ್ಧ –**

**ಆರೋಪಿತರು** ಶ್ರೀ ಕಾವೇರಿ ಕೋಂಃ ಕೃಷ್ಣ ನಾಯ್ಕ,
ವಯಸ್ಸುಃ 54 ವರ್ಷ
ಸಾಃ 106, ತಲಗೋಡ, ಮಾವಿನಕುರ್ವೆ,
ಭಟ್ಕಳ ತಾಲೂಕು–581320.

**ಆಪಾದನೆ**

ಶ್ರೀ ನವೀನ ಕೃಷ್ಣ ನಾಯ್ಕ ರವರು ದಿನಾಂಕಃ 08–07–2022 ರಂದು ಪಿರ್ಯಾದಿ ಸೊಸೈಟಿಯಲ್ಲಿ ರೂ.80,000/– (ರೂಪಾಯಿ ಎಂಭತ್ತು ಸಾವಿರ ಮಾತ್ರ) ಹಣವನ್ನು ಸಾಲದ ಖಾತೆ ಸಂಖ್ಯೆಃ BL No.1454 ರಲ್ಲಿ ವ್ಯವಹಾರ ಸಾಲವಾಗಿ ಪಡೆದುಕೊಂಡಿದ್ದು, ಸದ್ರಿ ಸಾಲಕ್ಕೆ ಆರೋಪಿಯಾದ ನೀವು ಜಾಮೀನುದಾರರಾಗಿರುತ್ತೀರಿ. ಸದ್ರಿ ಸಾಲದ ಹಣವನ್ನು ವಾರ್ಷಿಕ ಶೇಕಡಾ 15% ವಾರ್ಷಿಕ ಬಡ್ಡಿ ಮತ್ತು 3.75% ದಂಡದ ಬಡ್ಡಿ ದರದಂತೆ ಮರುಪಾವತಿಸುವುದಾಗಿ ಭರವಸೆ ನೀಡಿರುತ್ತೀರಿ. ದಿನಾಂಕಃ 24–11–2023 ಕ್ಕೆ ಒಟ್ಟೂ ರೂ.81,740/–( ಎಂಭತ್ತೊಂದು ಸಾವಿರದ ಏಳು ನೂರ ನಲವತ್ತು ಮಾತ್ರ ) ಬಾಕಿ ಇರುತ್ತದೆ. ನಂತರ ಸದ್ರಿ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ನೀವು ಫೆಡರಲ್ ಬ್ಯಾಂಕ್, ಭಟ್ಕಳ ಶಾಖೆಯ ಚೆಕ್ ನಂಬರ್ 111651 ನ್ನು ರೂ.81,740/–( ಎಂಭತ್ತೊಂದು ಸಾವಿರದ ಏಳು ನೂರ ನಲವತ್ತು ಮಾತ್ರ ಕ್ಕೆ ದಿನಾಂಕಃ 24–11–2023 ಎಂದು ನಮೂದಿಸಿ ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ದಿ.ಫೆಡರಲ್ ಬ್ಯಾಂಕ್, ಭಟ್ಕಳ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರಪಡಿಸಿದಾಗ,"Funds Insufficient"ಎಂಬ ಹಿಂಬರಹದೊಂದಿಗೆ ದಿನಾಂಕಃ 29–12–2023 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 03-01-2024 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ರಿಜಿಸ್ಟರ್ ಅಂಚೆ ಮುಖಾಂತರ ನಿಮಗೆ ಕಳುಹಿಸಿದ್ದು, ನೋಟಿಸು ಮುಟ್ಟಿದ 15 ದಿವಸದೊಳಗಡೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ ಸೂಚಿಸಿದ್ದು ಇರುತ್ತದೆ, ಸದ್ರಿ ನೋಟಿಸ್ಸನ್ನು ನೀವು ಸ್ವೀಕರಿಸದೇ ದಿನಾಂಕಃ 16-01-2024 ರಂದು Unclaimed ಎಂದು ವಾಪಸ್ಸು ಬಂದಿರುತ್ತದೆ. ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ - ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ - ಹೌದು

ಪ್ರಶ್ನೆ - ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 18-09-2025.

ನ್ಯಾಯಿಕ ದಂಡಾಧಿಕಾರಿ, ಭಟ್ಕಳ.